ಅವಳೂ ಹೌದೆಂಬಂತೆ ತಲೆಯಾಡಿಸಿದಳು.

'ಸುಧೀ ಅಂದ್ರೆ ನಿಮ್ಮ ಹಸ್ಬೆಂಡ್?' ಈ ಬಾರಿ ನೇರ ಅವಳನ್ನೇ ಕೇಳಿದೆ.

'ಸುಧನ್ವ... ಫ್ರೆಂಡ್ಸ್, ಫ್ಯಾಮಿಲಿ ಸರ್ಕಲ್‌ನಲ್ಲಿ ಸುಧಿ' ನಕ್ಕಳು. ಬೀಡಾ ಜಗಿದಿದ್ದರಿಂದ ನಾಲಗೆಗೆ ಕೆಂಪಿನ ಮೆರುಗು.

'ಮದುವೆಯಾದ ಹೆಣ್ಣು ಎಲೆಅಡಿಕೆ ಜಗಿದಾಗ ನಾಲಗೆಗೆ ಅಂಟುವ ಕೆಂಪು ಅವಳ ಗಂಡನ ಮೇಲಿನ ಪ್ರೀತಿಯ ದ್ಯೋತಕ, ಕೆಂಪಾದಷ್ಟೂ ಪ್ರೀತಿ ಹೆಚ್ಚು' ವಯಸ್ಸಿನಲ್ಲಿದ್ದಾಗ ಅಜ್ಜಿ ಹೇಳುತ್ತಿದ್ದ ಮಾತು. ಸೃಜನಾ ತನ್ನ ಗಂಡನನ್ನು ತುಂಬಾ ಪ್ರೀತಿಸುತ್ತಿರಬಹುದೆ?

'ಉದಯನ ಫಂಕ್ಷನ್ ನಾಡಿದ್ದು ತಾನೇ? ನಾಳೆ ಊಟಕ್ಕೆ ನಮ್ಮ ಮನೆಗೇ ಬನ್ನಿ. ಫಣಿ ನೀನೇ ಕರ್ಕೊಂಡು ಬಾ. ತಿಂಡಿ ಮುಗಿಸಿ ಬನ್ನಿ. ಒಂದಷ್ಟು ತರಲೆ, ಬಾಲ್ಯದ ಮೆಲುಕು ಎಲ್ಲಕ್ಕೂ ಟೈಮ್ ಇರುತ್ತೆ.'

ನನ್ನ ತಾಂಬೂಲ ಅವಳದರ ಜೊತೆ ಅವಳ ಕಾರಿನ ಹಿಂದಿನ ಸೀಟಿಗೆ ಹೋಯಿತು. ಬೈ ಎಂದು ಕೈಯಾಡಿಸಿ ಕಾರು ಮುಂದಕ್ಕೆ ಓಡಿಸಿದಳು. ನನ್ನ ಮರ್ಕಟ ಮನ ಹುಚ್ಚಾಗಿ ಕುಣಿದಿತ್ತು.

'ನಾನು ಅವಂತಿ ಮನೆಗೆ ಹೋಗಬೇಕು, ಅಮ್ಮ ಅಲ್ಲೇ ಇದ್ದಾರೆ. ಇವತ್ತು ಬರ್ತೀನಿ ಅಂತ ಹೇಳಿದ್ದೆ' ಫಣಿಗೆ ಹೇಳಿದೆ. 'ಬಾ ನಾನೇ ಡ್ರಾಪ್ ಮಾಡ್ತೀನಿ' ಎಂದಾಗ ನಿರಾಳವಾಯ್ತು.

'ನನಗೆ ಸೃಜನಾಳ ಗುರುತೇ ಸಿಗಲಿಲ್ಲ. ಫಾರ್ ದಟ್ ಮ್ಯಾಟರ್, ನನಗೆ ಬಹಳ ಸಹಪಾಠಿಗಳ ಮುಖವೇ ಮರೆತುಹೋಗಿದೆ' ಕಾರಿನಲ್ಲಿ ಮಾತು ಶುರು ಮಾಡಿದೆ.

'ನೀನು ಎಷ್ಟೇ ಆಗಲಿ ಎಲ್ಲದರಲ್ಲೂ ಮೊದಲಿಗ, ನಮ್ಮ ಹಾಗಾ? ತುಂಟಾಟ, ಕೀಟಲೆ ಮಾಡೋವ್ರೆಲ್ಲ ನಮ್ಮ ಗುಂಪು. ಹಾಗೆ ನೋಡಿದ್ರೆ, ಯುಎಸ್‌ನಿಂದ ಬರೋ ಗೆಸ್ಟ್‌ಗೆ ಹಾಸ್ಪಿಟಾಲಿಟಿ ನನ್ನದೇ ಅಂದಾಗ ಆ ಅತಿಥಿ ನೀನು ಅಂತ ಕನಸಲ್ಲೂ ಅಂದ್ಕೊಂಡಿರಲಿಲ್ಲ. ನೀನು ಮೊದಲಿನ ಹಾಗೇ ಬಿಗುವಾಗೆ ಇರ್ತೀಯ ಅಂದ್ಕೊಂಡಿದ್ದೆ. ಬಟ್ ಯೂ ಹ್ಯಾಡ್ ಚೇಂಜ್ಡ್. ನನ್ನ ಕಂಫರ್ಟ್ ಜೋನ್‌ಗೆ ನೀನು ಬಂದಿದ್ದೆ. ನಿಜವಾದ ಗೆಳೆತನ ಶುರುವಾಗಿದ್ದೇ ಅಂದಿನಿಂದ.'

'ಹೂಂ, ಉದ್ಯೋಗ, ದಾಂಪತ್ಯ ನನಗೆ ಬಹಳ ಪಾಠಗಳನ್ನು ಕಲಿಸಿತ್ತು... ಬದಲಾವಣೆ ಅನಿವಾರ್ಯವಾಗಿತ್ತು.'

'ಅಷ್ಟಲ್ಲದೇ ಇಲ್ಲಿಗೆ ವಾಪಸ್ ಬರ್ತಿದ್ಯಾ? ಬಿಡು, ಎಲ್ಲ ಸರಿಹೋಗುತ್ತೆ.'

'ಇಲ್ಲ ಫಣಿ, ನಾನು ಮತ್ತೆ ಅಲ್ಲಿಗೆ ಹೋಗುವ ಸಾಧ್ಯತೆ ಇಲ್ಲ.'

ಫಣಿ ಹುಬ್ಬೇರಿಸಿದ ಪ್ರಶ್ನಾರ್ಥಕವಾಗಿ,

'ಹೌದು, ಶರ್ಮಿ ಇಲ್ಲಿಗೆ ಯಾವತ್ತೂ ಬರೋಲ್ಲ, ಅಲ್ಲಿಯ ಆಕರ್ಷಣೆ ಗಾಢವಾಗಿದೆ. ನಾನು ಯಾವತ್ತೂ ಬೇಡವಾದ ಪಾತ್ರವೇ, ಅವಳ ಮಟ್ಟಿಗೆ. ನನಗೆ ಅಲ್ಲಿ ಇರೋಕ್ಕೆ ಅಸಾಧ್ಯ ಅನ್ನಿಸಿ ಇಲ್ಲಿಗೆ ಮರಳಿದ್ದು. ನನ್ನ ನಿರ್ಧಾರಕ್ಕೆ ಮಗ ವಿಪಿನ್ ಸಪೋರ್ಟ್ ಮಾಡಿದ. ವಿಪುಲ ನನ್ನ ಮಗಳಾಗಿ ಬೆಳೆಯಲೇ ಇಲ್ಲ, ಅವಳು ಅಮ್ಮನ ಕೂಸೇ! ನನ್ನ ಮೇಲೆ ಅಟ್ಯಾಚ್ಮೆಂಟ್ ಬರಲೇ ಇಲ್ಲ. ಉಸಿರುಗಟ್ಟೋ ವಾತಾವರಣ. ಹೇಗೂ ಅವಳೂ ದುಡೀತಿದ್ದಾಳೆ, ನನ್ನಿಂದ ಯಾವ ನಿರೀಕ್ಷೆನೂ ಇಲ್ಲ. ಆದರೂ ಮನೆ ಅವಳಿಗೇ ಬಿಟ್ಟೆ. ನನ್ನ ಮಕ್ಕಳ ತಾಯಿ ಅಷ್ಟೇ, ನನ್ನ ಮನದನ್ನೆಯಾಗಲೇ ಇಲ್ಲ.'

ಇಷ್ಟು ಹೇಳುವ ಹೊತ್ತಿಗೆ ಗಂಟಲು ತುಂಬಿತ್ತು. ನನ್ನದು ನಿಸ್ಸಾರ ದಾಂಪತ್ಯ ಎಂಬುದು ಅವನಿಗೆ ತಿಳಿಯದ್ದೇನಲ್ಲ. ಅದಕ್ಕೊಂದು ತಾರ್ಕಿಕ ಅಂತ್ಯ ಕೊಟ್ಟ ವಿಷಯ ಅವನನ್ನು ಡಿಸ್ಟರ್ಬ್ ಮಾಡಿತ್ತು.

ಎರಡು ನಿಮಿಷಗಳ ಸಿಗ್ನಲ್. ಸೆಕೆಂಡುಗಳು ಇಳಿಯುತ್ತಿದ್ದವು – 120, 119, 118...

ಶರ್ಮಿಳಾ ನನ್ನ ಹೆಂಡತಿಯಾಗಿ ಬಂದವಳು. 'ನಿಮ್ಮೊಂದಿಗೆ ಮದುವೆ ಇನಿತೂ ಇಷ್ಟವಿಲ್ಲ,